ಈಗ ನನ್ನ ಕನ್ನಡದಲ್ಲಿ, ನಾನೇ ನಟಿಸಿದ ಸೀರೀಸ್ ಬಿಡುಗಡೆ ಆಗಿದೆ. ಅದೊಂಥರಾ ಖುಷಿ.

'ಲವ್ ಯು ಅಭಿ' ವೆಬ್ ಸೀರೀಸ್‌ನದ್ದು ಸುಂದರ ಕಂಟೆಂಟ್. ನೀವು ಈ ಸೀರೀಸ್ ಅನ್ನು ಮೆಚ್ಚದೇ ಇರಲು ಸಾಧ್ಯವೇ ಇಲ್ಲ. ಕೆಲವು ಪಾತ್ರ, ವಿಷಯಗಳು ನಿಮ್ಮ ಹೃದಯದಲ್ಲಿ ಉಳಿದುಬಿಡುವುದು ಗ್ಯಾರಂಟಿ. ಲವ್, ಸಸ್ಪೆನ್ಸ್, ಥ್ರಿಲ್ಲರ್, ಆಕ್ಷನ್, ಫ್ಯಾಮಿಲಿ – ಡ್ರಾಮಾ ಎಲ್ಲದರ ಪ್ಯಾಕೇಜ್. ಹೇಳಿಕೊಳ್ಳಲಾಗದ ಕೆಲವು ಭಾವನೆಗಳು ಇದರಲ್ಲಿ ವ್ಯಕ್ತವಾಗಿವೆ. ಕುಟುಂಬದ ಜೊತೆ ಕುಳಿತು ನೋಡಬಹುದಾದ ಕಥೆ. ಹೇಳಬೇಕಾದ್ದನ್ನು ಸೂಕ್ಷ್ಮವಾಗಿ, ನಾಜೂಕಾಗಿ ಹೇಳಲಾಗಿದೆ. ನೋಡಿದ ಮೇಲೆ ಅದರ ಪ್ರಭಾವ ಉಳಿಯುತ್ತದೆ. ಅದು ಈ ವೆಬ್ ಸೀರೀಸ್‌ನ ಗಟ್ಟಿತನ. ಇದು ನೀವು ನೋಡಲೇಬೇಕಾದ ವೆಬ್ ಸೀರೀಸ್.

◆ **ವಿಕ್ರಮ್ ರವಿಚಂದ್ರನ್ ಅವರೊಂದಿಗೆ ನಟಿಸಿದ ಅನುಭವ...**

ವಿಕ್ರಮ್ ಅವರಿಗೆಂದೇ ಈ ಪಾತ್ರ ಮಾಡಿದ ಹಾಗಿದೆ. ಅಷ್ಟು ಪರ್ಫೆಕ್ಟ್. ಅವರು ಕಣ್ಣಲ್ಲೇ ಎಲ್ಲಾ ಹೇಳಿಬಿಡುವಂತೆ ನಟಿಸಿದ್ದಾರೆ. ಆ ಪಾತ್ರ ನೋಡಿದ ಪ್ರತಿ ಹುಡುಗಿಯೂ ನನ್ನ ಹುಡುಗ ನನ್ನನ್ನು ಈ ರೀತಿ ಪ್ರೀತಿ ಮಾಡಬೇಕು ಎಂದು ಬಯಸುತ್ತಾಳೆ. ಪ್ರೀತಿಯ ಪೀಕ್ ಏನು ಎಂಬುದು ಈ ಸರಣಿಯಲ್ಲಿ ತಿಳಿಯುತ್ತದೆ. ಅಂಥ ಕ್ರೇಜಿ ಲವ್ ಅದು. ಕ್ರೇಜಿ ಸ್ಟಾರ್ ಮಗನ ಕ್ರೇಜಿ ಲವ್ ಸ್ಟೋರಿ ಎನ್ನಬಹುದು.

ಶ್ರೀನಾಥ್, ಅಂಬಿಕಾ, ರವಿಶಂಕರ್, ವಿನಯಪ್ರಸಾದ್ ಅವರಂಥ ಹಿರಿಯ ನಟರ ಜೊತೆಗಿನ ಒಡನಾಟವೂ ಸಂತಸ ಕೊಟ್ಟಿತು.

◆ **ಈ ವೆಬ್ ಸರಣಿಯಲ್ಲಿ ನಿಮ್ಮನ್ನು ಕಾಡಿದ ಭಾಗ?**

ಕ್ಲೈಮಾಕ್ಸ್ ನನ್ನ ಫೇವರೆಟ್. ಕ್ಲೈಮ್ಯಾಕ್ಸ್ ಶೂಟ್ ನಂತರ ಎರಡು ದಿನ ನಾನು ಅದೇ ಗುಂಗಲ್ಲಿದ್ದೆ. ನಗುತ್ತಾ ಇರುವುದು ಪ್ರೀತಿಯಲ್ಲ, ನಮಗೇ ಗೊತ್ತಿಲ್ಲದೇ ಕಣ್ಣೀರು ಬರುವುದೇ ಪ್ರೀತಿ. ಅದೊಂದು ಅದ್ಭುತ ಫೀಲಿಂಗ್ ಈ ಸರಣಿಯಲ್ಲಿದೆ.

◆ **'ಅಭಿರಾಮಿ' ನಿಮ್ಮನ್ನು ಆವರಿಸಿದ ಪರಿ...**

ಇದೊಂದು ಕ್ಲಾಸ್, ಗಂಭೀರ, ಇಂಡಿಪೆಂಡೆಂಟ್ ಹುಡುಗಿಯ ಪಾತ್ರ. 'ಅಭಿರಾಮಿ' ಪಾತ್ರದಲ್ಲಿ ನನ್ನನ್ನು ನೋಡಿ ನನಗೇ ಖುಷಿಯೆನಿಸುತ್ತಿತ್ತು. ನನ್ನ ಪಾತ್ರ ಮಾತ್ರವಲ್ಲ, ಇದರಲ್ಲಿನ ಪ್ರತಿ ಪಾತ್ರವೂ ವಿಭಿನ್ನವಾಗಿದೆ. ಅಭಿರಾಮಿ ಪಾತ್ರ ಮಾಡಿದ ಮೇಲೆ ಅಭಿ ಎಂದು ನನ್ನನ್ನು ಕರೆದರೆ ಖುಷಿಯಾಗುತ್ತದೆ.

ಆದರೆ ನನಗೆ ತದ್ವಿರುದ್ಧ ಕ್ಯಾರೆಕ್ಟರ್ ಇದು. ಜೊತೆಗೆ, ನಾನು ತುಂಬಾ ಪ್ರೀತಿಸಿದಂಥ ಪಾತ್ರ. 'ಅಭಿ'ಯಿಂದ ಸಾಕಷ್ಟು ಕಲಿತಿದ್ದೇನೆ, ಬದಲಾಗಿದ್ದೇನೆ.

ಇದರೊಂದಿಗೆ, ಪಾತ್ರ ಮಾಡುವ ಮುಂಚೆ ರಿಹರ್ಸಲ್ ಮಾಡಿದ ಮೊದಲ ಪ್ರಾಜೆಕ್ಟ್ ಇದು. ಇದಕ್ಕೂ ಮುಂಚೆ ಯಾವ ಸಿನಿಮಾಗೂ ನಾನು ರಿಹರ್ಸಲ್ ಮಾಡಿರಲಿಲ್ಲ. ನನ್ನ ವ್ಯಕ್ತಿತ್ವಕ್ಕೆ ಸವಾಲಾಗಿದ್ದಂಥ ಪಾತ್ರ ಎನ್ನಬಹುದು. ■




# ಶಾಲೆಗೆ ಬಂದ ಅಭಿಮನ್ಯು

**ಈ ಅಭಿಮನ್ಯು ಚಕ್ರವ್ಯೂಹವನ್ನು ಭೇದಿಸಿದ ಶೂರನಲ್ಲ, ಅನ್ಯಗ್ರಹದಿಂದ ಭೂಮಿಗೆ ಬಂದಿರುವ ವಿಶೇಷ ಅತಿಥಿ!**

ಶಾಲೆಯ ಮೈದಾನದಲ್ಲಿ ಆಡುತ್ತಿದ್ದ ಮಕ್ಕಳ ಚಿತ್ತವೆಲ್ಲಾ ಗೇಟ್‌ನತ್ತಲೇ ನೆಟ್ಟಿತ್ತು. ಯಾರನ್ನೋ ಕಾಣುವ ಕುತೂಹಲ ಕಣ್ಣುಗಳಲ್ಲಿ. ಬರುತ್ತಿರುವವರು ಯಾರಿರಬಹುದೆಂಬ ಚರ್ಚೆ, ಒಬ್ಬೊಬ್ಬರ ಮುಖದಲ್ಲೂ ಒಂದೊಂದು ಪ್ರಶ್ನೆ.

ಹೀಗೆ ಸಂತಸದಿಂದ ಕಾಯುತ್ತಾ ಪಿಸುಗುಡುತ್ತಿದ್ದ ಮಕ್ಕಳ ಕುತೂಹಲ ತಣಿಸಲೆಂಬಂತೆ 'ಅಭಿಮನ್ಯು' ಬಂದೇಬಿಟ್ಟ. ಅಭಿಮನ್ಯು ನೋಡುತ್ತಲೇ, ಕಣ್ಣರಳಿಸಿಕೊಂಡು ಚಪ್ಪಾಳೆ ಹೊಡೆಯುತ್ತಾ ಕುಣಿದಾಡಿದ ಪುಟಾಣಿಗಳ ಮುಖ ಇಷ್ಟಗಲವಾಗಿತ್ತು. ಖುಷಿಖುಷಿಯಿಂದ ಅವನನ್ನು ಸ್ವಾಗತಿಸಿ, ಹಾಡಿಗೆ ಕೂಡಿ ಹೆಜ್ಜೆ ಹಾಕಿದರು ಕೂಡ.

ಅಂದಹಾಗೆ ಈ ಅಭಿಮನ್ಯು ಯಾರು? ಶಾಲೆಗೆ ಅವನೇಕೆ ಬಂದ? ಮಕ್ಕಳಿಗೆ ಇವನನ್ನು ಕಂಡರೆ ಯಾಕಿಷ್ಟು ಖುಷಿ?

ಅದಕ್ಕೆ ಉತ್ತರ ಇಲ್ಲಿದೆ. ಮಕ್ಕಳ ಭಾವಕೋಶದಲ್ಲಿ ಕಥೆಗಳ ಪಾತ್ರ ತುಂಬಾ ಹಿರಿದು. ಅವರನ್ನು ನಗಿಸುವ, ಚಿಂತನೆಗೆ ಹಚ್ಚುವ, ಬುದ್ಧಿ ಚುರುಕುಗೊಳಿಸುವ, ಕಲ್ಪನೆಗಳಿಗೆ ರೆಕ್ಕೆ ಕಟ್ಟುವ, ಹೂವಿನಂತೆ ಮನ ಅರಳಿಸುವುದು ಈ ಕಥೆಗಳೇ. ಆದರೆ ಕಾಲ ಬದಲಾದಂತೆ ಕಥೆ ಹೇಳುವ ಪರಿಪಾಟವೂ ಬದಲಾಗಿ ಹೋಗಿದೆ. ಮಕ್ಕಳಿಗೆ ಭಿನ್ನಭಿನ್ನ ಧಾಟಿಯಲ್ಲಿ ಕಥೆ ಹೇಳುತ್ತಾ, ಅವರ ಮನರಂಜನೆಯನ್ನೇ ಆದ್ಯತೆಯಾಗಿಟ್ಟುಕೊಂಡ ಸಾಕಷ್ಟು ಟೀವಿ ಕಾರ್ಯಕ್ರಮಗಳು ರೂಪುಗೊಂಡಿವೆ.

ಈ ನಿಟ್ಟಿನಲ್ಲಿ ಹುಟ್ಟಿಕೊಂಡ ಕಾರ್ಟೂನ್‌ಗಳು ಮಕ್ಕಳ ನೆಚ್ಚಿನ ಗೆಳೆಯರು. ಇದಕ್ಕೂ ಮುಂದೆ ಹೋಗಿ ಅನಿಮೇಷನ್‌ಗಳು ರೂಪುತಳೆದವು. ಸುಂದರ ಕಥೆಯೊಂದನ್ನು ಮಕ್ಕಳ ಕಲ್ಪನೆಗೆ ಒಗ್ಗಿಸಿ ಬಣ್ಣ ತುಂಬಿ ಪಾತ್ರಗಳನ್ನು ಸೃಷ್ಟಿಸುವಲ್ಲಿ ಅನಿಮೇಷನ್ ಪಾತ್ರ ದೊಡ್ಡದು. ಇಂಥದ್ದೇ ಒಂದು ಅನಿಮೇಷನ್ ಪಾತ್ರ ಈ ಅಭಿಮನ್ಯು.

ಈ 'ಅಭಿಮನ್ಯು'ವಿನ ವೇಷಧಾರಿಯನ್ನೇ ಬೆಂಗಳೂರಿನ ಹೋಪ್ ಫೌಂಡೇಷನ್ ಸ್ಕೂಲ್‌ನ ಮಕ್ಕಳು ಖುಷಿಖುಷಿಯಿಂದ ಸ್ವಾಗತಿಸಿದ್ದು.

ಬಹುವರ್ಷಗಳಿಂದ, ಮಕ್ಕಳಿಗೆಂದೇ ಮನರಂಜನಾ ಕಾರ್ಯಕ್ರಮಗಳನ್ನು ರೂಪಿಸುತ್ತಿರುವ 'ನಿಕೆಲೋಡಿಯನ್' ಚಾನಲ್, ಹೊಸ ಸೀರೀಸ್ ಆರಂಭಿಸಿದೆ. 'ಅಭಿಮನ್ಯು ಕೀ ಏಲಿಯನ್ ಫ್ಯಾಮಿಲಿ' ಎಂಬ ಸೀರೀಸ್ ರೂಪಿಸಿದ್ದು, ಹಿಂದಿಯಲ್ಲಿನ ಈ ಸೈನ್ಸ್–ಫಿಕ್ಷನ್ ಕಾಮಿಡಿ ಸೀರೀಸ್ ಮಕ್ಕಳ ಮನಸೂರೆಗೊಳಿಸಿ, ಅವರ ಲೋಕದಲ್ಲಿ ಒಂದಾಗಿಬಿಟ್ಟಿದೆ.

ಅನ್ಯಗ್ರಹ ಜೀವಿಯಾದ ಅಭಿಮನ್ಯು ಹಾಗೂ ಅವನ ಮೂರು ಜನರ ತಂಡ ಭೂಮಿಗೆ ಬಂದು ಇಲ್ಲಿನ ಜನರನ್ನು ಭೇಟಿಯಾಗುವ, ಹೊಸತನ್ನು ನೋಡುವ, ಇಲ್ಲಿನ ಸಂಸ್ಕೃತಿ, ರೀತಿ ರಿವಾಜು ಕಲಿಯುವ, ಎದುರಾಗುವ ಸಮಸ್ಯೆಗಳನ್ನು ನಿವಾರಿಸಿಕೊಳ್ಳುವ ಪ್ರಕ್ರಿಯೆಯನ್ನೇ ಹಾಸ್ಯವಾಗಿ ತೋರಿಸುತ್ತಿರುವುದು ಮಕ್ಕಳಿಗೆ ಮಜವೆನಿಸಿದೆ. ಏಲಿಯನ್ ಸಂಬಂಧಿ ಮೊದಲ ಸೀರೀಸ್ ಇದಾಗಿದ್ದು, ಸೋಮವಾರದಿಂದ ಶುಕ್ರವಾರ ಮಧ್ಯಾಹ್ನ 12ಕ್ಕೆ ಪ್ರಸಾರಗೊಳ್ಳುತ್ತಿದೆ. ಇದಕ್ಕೆ ಉತ್ತಮ ಪ್ರತಿಕ್ರಿಯೆಯೂ ಬಂದಿದೆ.

ಇತ್ತ 'ಹೋಪ್' ಶಾಲೆಯ ಮಕ್ಕಳೂ, ಬೆಂಗಳೂರಿಗೆ ಬಂದ ಈ ಅನ್ಯಗ್ರಹ ಜೀವಿ ಅಭಿಮನ್ಯುವನ್ನು ನೇರ ನೋಡಿದ ಖುಷಿಯಲ್ಲಿ ಅವನೊಂದಿಗೆ ಕೆಲ ಸಮಯ ಮಾತಿಗಿಳಿದರು. ಮುಗ್ಧ ನಗುವಿನೊಂದಿಗೆ, ಅವನಿಗೆ ಹೇಗೆ ನಮಸ್ಕಾರ ಮಾಡಬೇಕು, ಹೈಫೈ ಮಾಡಬೇಕು ಎಂಬುದನ್ನೂ ಹೇಳಿಕೊಟ್ಟರು. ಬಗೆಬಗೆಯಾಗಿ ಫೋಟೊ ತೆಗೆಸಿಕೊಂಡು ಸಂತಸಪಟ್ಟರು. ಅವನ ರೂಪ ನೋಡಿ ಬೆರಗುಗಣ್ಣುಗಳಿಂದಲೇ, 'ಸೂಪರ್ ಅಭಿಮನ್ಯು' ಎನ್ನುತ್ತಾ ಅಭಿಮನ್ಯುವನ್ನು ಒಲ್ಲದ ಮನಸ್ಸಿನಿಂದ ಬೀಳ್ಕೊಟ್ಟರು. ■